CC- 2172/2025

ಪಿ. ಡಬ್ಲ್ಯೂನಂ. - 2

ದಿನಾಂಕಃ 29.07.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು

**ಮುಂದುವರೆದ ಮುಖ್ಯ ವಿಚಾರಣೆಃ ಎಪಿಪಿ ರವರಿಂದಃ –**

ಸಾಕ್ಷಿಯು ಆರೋಪಿತನನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ– ಆರೋಪಿತನ ಪರ ಶ್ರೀ. ಎಸ್.ಎನ್.ಎಂ ವಕೀಲರಿಂದಃ– –**

**1.** ದಿನಾಂಕ 10.01.2025 ರಂದು ರಾತ್ರಿ ಆರೋಪಿತನನ್ನು ಪ್ರಭಾರ ನ್ಯಾಯಾಧೀಶರ ಮುಂದೆ ಹಾಜರು ಪಡಿಸಿದಾಗ ಆರೋಪಿತನನ್ನು 1 ಲಕ್ಷ ರೂ.ಗಳ ವೈಯಕ್ತಿಕ ಬಾಂಡಿನ ಮೇಲೆ ಬಿಡುಗಡೆ ಮಾಡಿದ್ದರು ಎಂದರೆ, ಇರಬಹುದು. ಸದರಿ ನ್ಯಾಯಾಧೀಶರು ಆರೋಪಿತನನ್ನು ಬಂಧಿಸುವಾಗ ಮಾನ್ಯ ಸರ್ವೋಚ್ಛ ನ್ಯಾಯಾಲಯದ ಮಾರ್ಗಸೂಚಿಗಳನ್ನು ಪಾಲನೆ ಮಾಡಿಲ್ಲ ಎಂದು ಅಭಿಪ್ರಾಯ ಪಟ್ಟಿದ್ದಾರೆ ಎಂದರೆ, ಇರಬಹುದು. ಚಾ.ಸಾ 2 ರವರು ಕೊಟ್ಟ ದೂರಿನ ಮೇರೆಗೆ ನಮ್ಮ ಸಿಬ್ಬಂದಿ 4 ಜನ ಆರೋಪಿತರು ಹಾಗೂ ಒಂದು ಲಗೇಜ್ ವಾಹನವನ್ನು ತಂದು ಠಾಣಾ ಆವರಣದಲ್ಲಿ ಹಾಜರು ಪಡಿಸಿದ್ದರು ಎಂದರೆ, ಸಾಕ್ಷಿಯು ಚಾ.ಸಾ 2 ರವರು ನೀಡಿದ ಮಾಹಿತಿಯಂತೆ ಶಡ್ತಿಕೆರೆ ಗ್ರಾಮದ ಬಳಿ ನಮ್ಮ ಸಿಬ್ಬಂದಿ ಹೋಗಿ ಯಾವುದೇ ಅನಾಹುತ ಆಗಬಾರದು ಎಂದು ಸಂಶಯದ ಮೇರೆಗೆ 4 ಜನ

ಆರೋಪಿತರನ್ನು ನಮ್ಮ ಸಿಬ್ಬಂದಿ ಹಾಗೂ ಚಾ.ಸಾ 2 ರವರು ಕರೆದುಕೊಂಡು ಬಂದರು. ಸದರಿ 4 ಜನ ಆರೋಪಿತರನ್ನು ನಮ್ಮ ಸಿಬ್ಬಂದಿ ದಸ್ತಗಿರಿ ಮಾಡಿ ನನ್ನ ಮುಂದೆ ಹಾಜರು ಪಡಿಸಿರಲಿಲ್ಲ ಎಂದರೆ ಸರಿ. ನಮ್ಮ ಸಿಬ್ಬಂದಿ ಹಾಜರು ಪಡಿಸಿದ ಲಗೇಜ್ ವಾಹನದಲ್ಲಿ ಯಾವುದೇ ಜಾನುವಾರುಗಳು ಇರಲಿಲ್ಲ ಎಂದರೆ ಸರಿ.

**2.** ಚಾ.ಸಾ 2 ರವರು ನಮ್ಮ ಇಲಾಖೆಯ ಖಾಯಂ ಬಾತ್ಮೀದಾರ ಎನ್ನುವುದು ಸರಿಯಲ್ಲ. ಸದರಿ 4 ಜನರನ್ನು ಠಾಣೆಗೆ ಕರೆದುಕೊಂಡು ಬರಲು ಅವರ ಮೇಲೆ ನಮ್ಮ ಸಿಬ್ಬಂದಿಗೆ ಏಕೆ ಸಂಶಯ ಉಂಟಾಯಿತು ಎಂದರೆ,

1. ಸದರಿ ವ್ಯಕ್ತಿಗಳು ಸ್ಥಳೀಯ ವಾಸಿಗಳಾಗಿರಲಿಲ್ಲ.
2. ಶಡ್ತಿಕೆರೆ ಹಾಗೂ ಸುತ್ತ ಮುತ್ತ ಗ್ರಾಮಗಳಲ್ಲಿ ಮೇಲಿಂದ ಮೇಲೆ ದನಗಳು ಕಳುವು ಆಗುತ್ತಿತ್ತು.
3. ಸದರಿ ಲಗೇಜ್ ವಾಹನವನ್ನು ಆ 4 ಜನ ವ್ಯಕ್ತಿಗಳು/ ಆರೋಪಿತರು ಮರೆಯಲ್ಲಿ ನಿಲ್ಲಿಸಿದ್ದರು.
4. ಸದರಿ ವ್ಯಕ್ತಿಗಳು ಮತ್ತು ವಾಹನವು ಶಡ್ತಿಕೆರೆ ಗ್ರಾಮದ ವಾಸಿ ಹಾಗೂ ವಾಹನವಾಗಿರಲಿಲ್ಲ. ಅವರನ್ನು ಗ್ರಾಮಸ್ಥರು ವಿಚಾರಿಸಿದಾಗ ಸದರಿ ವ್ಯಕ್ತಿಗಳು ಸಂಶಯ ಬರುವಂತೆ ವರ್ತಿಸಿರುವುದರಿಂದ ಮತ್ತು ಆ ಗ್ರಾಮಸ್ಥರು ಸದರಿ ವ್ಯಕ್ತಿಗಳು ದನ ಕಳುವು ಮಾಡುವ ಉದ್ದೇಶದಿಂದ ಬಂದಿರುವುದಾಗಿ ಒಪ್ಪಿಕೊಂಡರು ಎಂದು ಗ್ರಾಮಸ್ಥರು ತಿಳಿಸಿರುವುದರಿಂದ ಅವರ ಮೇಲೆ ಸಂಶಯ ಬಂದಿತು.

**3.** ಆ ದಿನ ನಮ್ಮ ಸಿಬ್ಬಂದಿ ಕರೆದುಕೊಂಡು ಬಂದ 4 ಜನ ವ್ಯಕ್ತಿಗಳ ವಿರುದ್ಧ ಪ್ರಕರಣ ದಾಖಲಾಗಿದೆಯೇ ನಾನು ಸದರಿ ಕೇಸಿನ ತನಿಖಾಧಿಕಾರಿ ಅಲ್ಲ ಎನ್ನುತ್ತಾರೆ. ಸದರಿ ವ್ಯಕ್ತಿಗಳನ್ನು ಮತ್ತು ವಾಹನವನ್ನು ನಮ್ಮ ಸಿಬ್ಬಂದಿ ಹಾಗೂ ಚಾ.ಸಾ 2 ರವರು ನನ್ನ ಎದುರಿಗೆ ಹಾಜರು ಪಡಿಸಿದರು ಎಂದರೆ ಸರಿ. ಸದರಿ ಲಗೇಜ್ ವಾಹನವನ್ನು ರಸ್ತೆಯ ತೀರಾ ಅಂಚಿನಲ್ಲಿ ನಿಲ್ಲಿಸಿದ್ದರಿಂದ ನಮ್ಮ ಸಿಬ್ಬಂದಿಗೆ ಹಾಗೂ ಗ್ರಾಮಸ್ಥರಿಗೆ ಸಂಶಯ ಉಂಟಾಗಿರುತ್ತದೆ. ಯಾವುದೇ ಸಕಾರಣಗಳಿಲ್ಲದೆ ನಮ್ಮ ಸಿಬ್ಬಂದಿ 4 ಜನ ಅಸಾಮಿಗಳನ್ನು ಹಾಗೂ ಲಗೇಜ್ ವಾಹನವನ್ನು ಠಾಣೆಗೆ ತಂದು ಹಾಜರು ಪಡಿಸಿದ ಕಾರಣ ಸಾಮಾಜಿಕ ಕಾರ್ಯಕರ್ತರಾದ ಬೆಳಲಮಕ್ಕಿ ಕನ್ನಪ್ಪ, ದುಗೂರು ಪರಮೇಶಿ, ಶಿರುವಾಳದ ರಾಮಪ್ಪ, ಉಮೇಶ ಮೊಘವೀರ, ಪುರಸಭೆಯ ಮಾಜಿ ಅಧ್ಯಕ್ಷರಾದ ತಿ.ನ ಶ್ರೀನಿವಾಸ, ಹೆಚ್.ಪಿ ರಾಘವೇಂದ್ರ ಮತ್ತು ಆರೋಪಿತನು ಕೇಳಲು ಬಂದಿದ್ದರು ಎಂದರೆ ಸರಿಯಲ್ಲ. ಇದರಿಂದ ಸಿಟ್ಟಾದ ನಾನು ಮತ್ತು ನನ್ನ ಸಿಬ್ಬಂದಿ ಸದೃಢ ದೇಹವುಳ್ಳ ಆರೋಪಿತನ ಅಂಗಿಯನ್ನು ಹರಿದು ಹಾಕಿದೆವು ಎಂದರೆ ಸರಿಯಲ್ಲ. ಆ ಕಾರಣದಿಂದ ಮತ್ತು ಆರೋಪಿತನು ಕೇಳಿದ ಪ್ರಶ್ನೆಗೆ ನಾವು ಸಮರ್ಪಕ ಮಾಹಿತಿಯನ್ನು ನೀಡದ ಕಾರಣ ಮತ್ತು ಹೆಚ್ ಪಿ

ರಾಘವೇಂದ್ರ ವಕೀಲರು ಠಾಣಾ ಹೊರಭಾಗದಲ್ಲಿ ನಿಂತು ವೀಡಿಯೋ ಮಾಡುತ್ತಾ ಅಲ್ಲಿ ಮೇಲೆ ಹೇಳಿದ ವ್ಯಕ್ತಿಗಳು ಪ್ರತಿಭಟನೆಗೆ ಕುಳಿತು ಆರೋಪಿತನು ಮತ್ತು ಸದರಿ 4 ಜನ ವ್ಯಕ್ತಿಗಳಿಗೆ ವಿನಃ ಕಾರಣ ತೊಂದರೆ ನೀಡಬೇಡಿ ಎಂದು ಹೇಳಿದರು ಎಂದರೆ ಸರಿಯಲ್ಲ. ಈ ಎಲ್ಲಾ ಘಟನೆಯು ನಮ್ಮ ಠಾಣೆಯ ಮುಂಭಾಗದಲ್ಲಿ ಇದ್ದ ಸಿಸಿ ಕ್ಯಾಮೇರಾ ಟಿವಿಯಲ್ಲಿ ಸೆರೆಯಾಗಿದೆ ಎಂದರೆ ಸರಿಯಲ್ಲ. ಮುಂದುವರೆದು ಪ್ರತಿಭಟನೆ ಮಾಡುವ ಸಂದರ್ಭದಲ್ಲಿ ಸಾಗರ ಟೌನ್ ಪೋಲಿಸ್ ಠಾಣೆಯ ರೌಡಿ ಅಸಾಮಿಗಳಾದ ಮೇಲೆ ಹೇಳಿದ ತಿ ನ ಶ್ರೀನಿವಾಸ, ಆರೋಪಿ ರವಿ ಕುಗ್ವೆ ಹಾಗೂ ದುಗೂರು ಪರಮೇಶಿ ನನಗೆ ಮತ್ತು ನಮ್ಮ ಸಿಬ್ಬಂದಿಗೆ ಅಶ್ಲೀಲವಾಗಿ ಹಾಗೂ ನಮ್ಮ ಘನತೆಗೆ ಧಕ್ಕೆಯಾಗುವಂತೆ ಮಾತನಾಡಿದ್ದು, ನಮ್ಮ ಠಾಣೆಯ ಮುಂಭಾಗದಲ್ಲಿ ಅರೆ ನಗ್ನವಾಗಿ ಕುಳಿತು ನಮ್ಮ ಠಾಣೆಗೆ ಬರುವ ಸಾರ್ವಜನಿಕರಿಗೆ ತೊಂದರೆ ನೀಡಿದ್ದರಿಂದ, ಠಾಣೆಗೆ ಸಾರ್ವಜನಿಕರು ಸಹ ಈ ರೀತಿ ಮಾಡುವುದು ಸರಿಯಲ್ಲ ಎಂದು ಆರೋಪಿತನನ್ನು ಮತ್ತು ಮೇಲೆ ಹೇಳಿದ ವ್ಯಕ್ತಿಗಳಿಗೆ ತಿಳುವಳಿಕೆ ನೀಡಿದ ನಂತರವೂ ಸಹ ಆರೋಪಿತನು ಕಾನೂನು ಬಾಹೀರ ಕೃತ್ಯವನ್ನು ಮುಂದುವರೆಸಿ ನನ್ನ ಹಾಗೂ ನನ್ನ ಸಿಬ್ಬಂದಿಯ ಸರ್ಕಾರಿ ಕರ್ತವ್ಯಕ್ಕೆ ಅಡ್ಡಿ ಪಡಿಸಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿತನು ರೌಡಿ ಶೀಟರ್ ಅಲ್ಲ ಎಂದರೆ ಸರಿಯಲ್ಲ. ಆರೋಪಿತನು ಅರೆ ನಗ್ನವಾಗಿ ಕುಳಿತಿರಲಿಲ್ಲ, ಬದಲಾಗಿ ನಾನು ಮತ್ತು ನನ್ನ ಸಿಬ್ಬಂದಿ ಅವನ ಅಂಗಿಯನ್ನು ಹರಿದು ಹಾಕಿದ್ದೆವು ಎಂದರೆ ಸರಿಯಲ್ಲ. ಆರೋಪಿತನು ನನ್ನನ್ನು ಹಾಗೂ ನನ್ನ ಸಿಬ್ಬಂದಿಯನ್ನು ಕುರಿತು ರಾಬರಿ ಹಾಗೂ ಡಕಾಯಿತಿ ಮಾಡುವವರನ್ನು ಹಿಡಿಯಿರಿ ಎಂದು ಕೂಗಲಿಲ್ಲ ಎಂದರೆ ಸರಿಯಲ್ಲ. ಆರೋಪಿತನು ನಮ್ಮ ಹುಡುಗರನ್ನು ಏಕೆ ಠಾಣೆಗೆ ಕರೆದುಕೊಂಡು ಬಂದಿದ್ದೀರಿ ಎಂದು ನಮ್ಮ ಕಚೇರಿಗೆ ಬರಲಿಲ್ಲ ಎನ್ನುವುದು ಸರಿಯಲ್ಲ. ಮುಂದುವರೆದು ನನ್ನ ಚೇಂಬರಿನ ಸಿಸಿ ಟಿವಿ ಫೂಟೇಜನ್ನು ತನಿಖಾಧಿಕಾರಿಗಳಿಗೆ ಹಾಜರು ಪಡಿಸಿದ್ದು, ಅದರಲ್ಲಿ ಆರೋಪಿತನ ಕೃತ್ಯವು ಸೆರೆಯಾಗಿದೆ ಎನ್ನುತ್ತಾರೆ. ಎಲ್ಲರಂತೆ ಆರೋಪಿತನು ಸಹ ನಮ್ಮ ಠಾಣೆಗೆ ಬಂದಿದ್ದನೇ ಹೊರತು ನಾನು ಹೇಳುವಂತೆ ಯಾವುದೇ ಕೃತ್ಯವನ್ನು ಎಸಗಿಲ್ಲ ಎನ್ನುವುದು ಸರಿಯಲ್ಲ.

**4.** ನನ್ನ ಪ್ರಕಾರ ದಿನಾಂಕ 10.01.2025 ರಂದು ರಾತ್ರಿ ಸುಮಾರು 08.15 ಗಂಟೆಗೆ ಈ ಘಟನೆ ನಡೆಯಿತು. ನಮ್ಮ ಕೇಸಿಗೆ ಅನೂಕೂಲವಾಗುವಷ್ಟು ಮಾತ್ರ ಸಿಸಿ ಟಿವಿ ಫೂಟೇಜ್ ಅನ್ನು ಎಡಿಟ್ ಮಾಡಿ ತಂದು ಹಾಜರು ಪಡಿಸಿದ್ದೇವೆ ಎಂದರೆ ಸರಿಯಲ್ಲ. ಆರೋಪಿತನು ನನ್ನ ದೂರಿನಲ್ಲಿ ಹೇಳಿದಂತೆ ನಮಗೆ ಅವಾಚ್ಯವಾಗಿ ಬೈದ್ದು, ಸರ್ಕಾರಿ ಕರ್ತವ್ಯಕ್ಕೆ ಅಡ್ಡಿ ಪಡಿಸಿಲ್ಲ ಎಂದರೆ ಸರಿಯಲ್ಲ. ದಿನಾಂಕ 10.01.2025 ರಂದು ಈ ಘಟನೆಯ ನಂತರ ದೂರನ್ನು ನೀಡಿ ಬಂದು ನಂತರ ನಾನು ಕರ್ತವ್ಯ

ನಿರ್ವಹಿಸಿದ್ದೇನೆ. ಪ್ರತಿಷ್ಠೆಗೋಸ್ಕರ ನಾನು ಆರೋಪಿತನ ವಿರುದ್ಧ ಸುಳ್ಳು ದೂರನ್ನು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ನನ್ನ ದೂರಿನಲ್ಲಿ ಹೇಳಿದ ಎಲ್ಲಾ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಲಯ
ಮತ್ತು ಜೆಎಂಎಫ್‌ಸಿ, ಸಾಗರ.